(ಊ) ವಿಷಯ: ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪ್ರವೇಶದ ಬಗ್ಗೆ.

ಶ್ರೀ ಆರ್. ದಿನೇಶ್ ಗುಂಡೂರಾವ್ (ಗಾಂಧಿನಗರ) : ಅಧ್ಯಕ್ಷರೇ, ಈ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ತರಗತಿ ಪ್ರವೇಶದ ವಿಚಾರದಲ್ಲಿ ಸರ್ಕಾರ ಒಂದು ಆತುರದ ನಿರ್ಧಾರ ತೆಗೆದುಕೊಂಡಿದೆ ಎಂದರೆ ತಪ್ಪಾಗಲಾರದು. ಹಿಂದೆಯೆಲ್ಲಾ ಅದೇ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಹುಡುಗರಿಗೆ ಪ್ರವೇಶ ಸಿಗುತ್ತಿತ್ತು. 98 ಪರ್ಸೆಂಟ್ ಅವರದೇ ಅಡ್ಮಿಶನ್ ಆಗುತ್ತಿತ್ತು. ಆದರೆ ಈಗ ಅದನ್ನು ಬದಲಾವಣೆ ಮಾಡಿ ಶೇಕಡ 50ರಷ್ಟು ಅದೇ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವವರಿಗೆ, ಶೇಕಡ 40ರಷ್ಟು ರಾಜ್ಯದ ಇತರ ವಿಶ್ವವಿದ್ಯಾಲಯಗಳಿಗೆ ಬರತಕ್ಕದ್ದು ಮತ್ತೆ ಇನ್ನು 10 ಪರ್ಸೆಂಟ್ ಹೊರರಾಜ್ಯಗಳ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಅಂತ ಹೇಳಿದ್ದಾರೆ. ಇದು ಒಂದು ರೀತಿಯಲ್ಲಿ ಗ್ರಾಮೀಣ ಯುವಕರಿಗೆ ರೈತಯುವಕರಿಗೆ ಮತ್ತು ಬಡಯುವಕರಿಗೆ ಅನ್ಯಾಯವಾಗುತ್ತದೆ. ಏಕೆಂದರೆ ಸ್ನಾತಕೋತ್ತರ ಮಾಡಬೇಕಾದಾಗ ಬೇರೆ ವಿಶ್ವವಿದ್ಯಾಲಯಗಳಿಗೆ ಹೋಗಿ ಅಲ್ಲಿ ವಾಸಿಸಲು ಮನೆ ಮಾಡುವುದು ವಿದ್ಯೆ ಗಳಿಸುವುದು ಬಹಳ ಕಷ್ಟದ ಕೆಲಸ. ಈಗ 50 ಪರ್ಸೆಂಟ್ ನೀವು ಕಟ್ ಮಾಡಿದ್ದೀರಿ. ಇದರಿಂದ ಅದೇ ವಿಶ್ವವಿದ್ಯಾಲಯದ ವ್ಯಾಪ್ತಿ ಹುಡುಗರಿಗೆ ಅನ್ಯಾಯವಾಗುತ್ತದೆ ಮತ್ತು ಬೇರೆ ರಾಜ್ಯಗಳವರದು ಮತ್ತು ಬೇರೆ ವಿಶ್ವವಿದ್ಯಾಲಯಗಳ ಉಳಿದ ಸೀಟುಗಳನ್ನೂ ಕೊಡುತ್ತೇವೆ ಎಂದು ಹೇಳಿದ್ದೀರಿ. ನಾನು ಕೇಳುವುದು, ಮೊದಲು ಆ ವಿಶ್ವವಿದ್ಯಾಲಯದ ವ್ಯಾಪ್ತಿಯ ಹುಡುಗರಿಗೆ ಆದ್ಯತೆ ಕೊಡಿ. ಅಡ್ಮಿಶನ್ ಮಾಡಿಸಿ, ಹಾಗೂ ಉಳಿದರೆ ಅದನ್ನು ಬೇರೆ ವಿಶ್ವವಿದ್ಯಾಲಯ ಅಥವಾ ಬೇರೆ ರಾಜ್ಯಗಳ ಹುಡುಗರಿಗೆ ಕೊಡಿ. ಈ ತರಹ ನೀವು ಬದಲಾವಣೆ ಮಾಡಬೇಕು. ಏಕೆಂದರೆ ಅಧ್ಯಕ್ಷರೇ, ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದ ಉದ್ದೇಶ ಏನು? ಈಗ ತುಮಕೂರು, ಧಾರವಾಡ, ಗುಲ್ಬರ್ಗಗಳಲ್ಲೆಲ್ಲಾ ಮಾಡಿದ್ದೇವೆ, ಆ ವ್ಯಾಪ್ತಿಯ ಹುಡುಗರಿಗೆ ಅನುಕೂಲವಾಗಲಿ ಅಂತ ಆ ಮೂಲ ಉದ್ದೇಶದಿಂದಲೇ ಇವತ್ತು ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡಿರುವುದು. ಇವತ್ತು ಅವರದ್ದನ್ನು ನೀಡು ಕಡಿತ ಮಾಡಿ ಬೇರೆ ವಿಶ್ವವಿದ್ಯಾಲಯದವರಿಗೆ ಅವಕಾಶ ಮಾಡಿಕೊಟ್ಟರೆ ಅದರಿಂದ ಬಹಳ ಬಡಮಕ್ಕಳಿಗೆ ತೊಂದರೆಯಾಗುತ್ತದೆ. ನೀವು ಮಾಡಿರುವುದು ಏಕಪಕ್ಷೀಯ ನಿರ್ಧಾರ. ದಯವಿಟ್ಟು ಇದನ್ನು ಪುನರ್‌ಪರಿಶೀಲನೆ ಮಾಡಿ. ಇಲ್ಲಿ ಉನ್ನತ ಶಿಕ್ಷಣ ಸಚಿವರು ಇಲ್ಲ, ಆದ್ದರಿಂದ ದಯವಿಟ್ಟು ಒಳ್ಳೆಯ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪಿತವಾದ ವಿಷಯಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ಆ ಉತ್ತರದ ಪ್ರತಿಯನ್ನು ಅವರ ಅವಗಾಹನೆಗೆ ಕೊಟ್ಟಿರುವುದರಿಂದ ಅವರು ಸ್ಪಷ್ಟೀಕರಣ ಕೇಳಿದ್ದಾರೆ. ಆದರೆ ಶೂನ್ಯವೇಳೆಯಲ್ಲಿ ತಾವು ಪ್ರಸ್ತಾಪಿಸಿದ ವಿಷಯಕ್ಕೆ ಎಲ್ಲಾ ಸದಸ್ಯರೂ ಉತ್ತರವನ್ನು ಬಯಸುತ್ತಾರೆ. ಈಗ ನೀವು ಸ್ಪಷ್ಟೀಕರಣ ಕೇಳಿರುವುದರಿಂದ ಕೊಡಲು ನನಗೆ ಕಷ್ಟವಾಗುತ್ತದೆ. ಆದರೂ ಸಹ, ಸರ್ಕಾರದ ಉತ್ತರ ಹೀಗಿದೆ :–

"ಈ ವಿಷಯವನ್ನು ದಿನಾಂಕ: 28–09–2004 ರಂದು ನಡೆದ 42ನೇ ಅಂತರ ವಿಶ್ವವಿದ್ಯಾಲಯ ಮಂಡಳಿ ಸಭೆಯಲ್ಲಿ ಪ್ರಾರಂಭಿಕವಾಗಿ ಚರ್ಚಿಸಲಾಗಿತ್ತು. ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು ಸ್ನಾತಕೋತ್ತರ ಪದವಿ ಪ್ರವೇಶವನ್ನು ರಾಜ್ಯದ ಇತರ ಎಲ್ಲಾ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೂ ಮುಕ್ತವಾಗಿ ತೆರೆದ ಅವಕಾಶ ಕಲ್ಪಿಸಬೇಕೆಂಬ ಅಭಿಪ್ರಾಯ ನೀಡಿದ ಹಿನ್ನಲೆಯಲ್ಲಿ ಮೊದಲ ಹಂತದಲ್ಲಿ ರಾಜ್ಯದ ಇತರ ವಿಶ್ವವಿದ್ಯಾಲಯಗಳಿಗೆ ಆ ಸಮಯದಲ್ಲಿ ನಿಗದಿ ಪಡಿಸಿದ ಪ್ರವೇಶಾತಿಯನ್ನು ದ್ವಿಗುಣಗೊಳಿಸಲು ತೀರ್ಮಾನಿಸಲಾಯಿತು. ಪುನಃ ದಿನಾಂಕ: 17–08–05 ರಂದು ನಡೆದ 43ನೇ ಅಂತರ ವಿಶ್ವವಿದ್ಯಾಲಯ ಮಂಡಳಿಯ ಸಭೆಯಲ್ಲಿ ಆಗ ಜಾರಿಯಲ್ಲಿದ್ದ ಪ್ರವೇಶಾ ಮಿತಿಯ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ತದನಂತರ, ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು ಸ್ನಾತಕೋತ್ತರ ಪದವಿ ಪ್ರವೇಶಗಳು ಈ ಕೆಳಕಂಡಂತೆ ನಿಗದಿ ಪಡಿಸಲು ಒಮ್ಮತದಿಂದ ತೀರ್ಮಾನಿಸಲಾಯಿತು.

ಶೇ. 50 ರಷ್ಟು ಸ್ನಾತಕೋತ್ತರ ಸೀಟುಗಳ ಪ್ರವೇಶಾತಿಯನ್ನು ಅದೇ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮೀಸಲಾಗಿಡುವುದು. ಶೇ. 40 ರಷ್ಟು ಸ್ನಾತಕೋತ್ತರ ಸೀಟುಗಳ ಪ್ರವೇಶಾತಿಯನ್ನು ರಾಜ್ಯದ ಇತರೆ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಮೀಸಲಿಡುವುದು. ಶೇ 10 ರಷ್ಟು ಸ್ನಾತಕೋತ್ತರ ಸೀಟುಗಳನ್ನು ಹೊರ ರಾಜ್ಯದ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಮೀಸಲಿಡುವುದು. ಮೇಲಿನ 2 ಮತ್ತು 3ರ ಅಡಿಯಲ್ಲಿ ಭರ್ತಿಯಾಗದೇ ಉಳಿದ ಸೀಟುಗಳನ್ನು ಕ್ರಮಸಂಖ್ಯೆ 1 ರಂತೆ ಭರ್ತಿಮಾಡಲಾಗುವುದು. ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪ್ರವೇಶದ ವಿಷಯವನ್ನು ಪುನಃ ದಿ: 27–05–06 ರಂದು ನಡೆದ 44ನೇ ಅಂತರ ವಿಶ್ವವಿದ್ಯಾಲಯ ಮಂಡಳಿ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಹಾಗೂ ಈ ಮೊದಲೇ ತೀರ್ಮಾನಿಸಿದ ರೀತಿಯಲ್ಲಿಯೇ ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಲು ಎಲ್ಲಾ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಒಮ್ಮತದ ತೀರ್ಮಾನಕ್ಕೆ ಬಂದರು. ಆದರೆ ಈ ಬಗ್ಗೆ ಮೀಸಲಾತಿಯನ್ನು ಶೇ. 50 ಮತ್ತು 40 ರ ಬಗ್ಗೆ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯವನ್ನು ಕೆಲವು ವಿಶ್ವವಿದ್ಯಾಲಯಗಳ ಕುಲಪತಿಗಳು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚೆಯಾದ ನಂತರ, ಶೇ 50 ಮತ್ತು 40ನ್ನು ಒಟ್ಟಿಗೆ ಸೇರಿಸಿ ಅಥವಾ ಪ್ರತ್ಯೇಕವಾಗಿ ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿದ ರೀತಿಯಲ್ಲಿ ಮೀಸಲಾತಿಯನ್ನು ವಿಶ್ವವಿದ್ಯಾಲಯಗಳೇ ನಿರ್ಣಯಿಸಲು ತೀರ್ಮಾನಿಸಲಾಯಿತು".

ಶ್ರೀ ಆರ್. ದಿನೇಶ್ ಗುಂಡೂರಾವ್ : ಅಧ್ಯಕ್ಷರೇ, ನಾನು ಕೇಳುತ್ತಿರುವುದು ಆ ವಿಶ್ವವಿದ್ಯಾಲಯದ ವ್ಯಾಪ್ತಿ 106 ಮಕ್ಕಳಿಗೆ ನೀವು ಪ್ರಥಮ ಆದ್ಯತೆ ಕೊಡಿ. ಆದಾಗದೇ ಹೋದರೆ, ಬೇರೆಯವರಿಗೆ ಕೊಡಿ. ಸ್ನಾತಕೋತ್ತರ ಪದವಿಗೆ ಓದಲು ಅಲ್ಲಿರುವ ಹುಡುಗರಿಗೆ ಅವಕಾಶ ಕೊಡದೇ ಬೇರೆ ಕಡೆ ಹೋಗಿ ಓದಿ ಅಂದರೆ ಅದು ಹೇಗೆ ಸಾಧ್ಯ? ಇದರ ಬಗ್ಗೆ ತಾವು ಸ್ವಲ್ಪ ಪರಿಶೀಲಿಸಿ. ಎಲ್ಲರಿಗೂ ಇದು ಅನುಕೂಲವಾಗುವಂಥದ್ದೇ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಇದು ಅಂತರ ವಿಶ್ವವಿದ್ಯಾಲಯಗಳ ಕುಲಪತಿಗಳು ತೆಗೆದುಕೊಂಡಿರುವ ಒಮ್ಮತದ ನಿರ್ಧಾರ. ಅವರಿಗೆ ಅವರದೇ ಆದ ಸ್ವಾಯತ್ತತೆ ಇರುತ್ತದೆ ಮತ್ತು ಪದೇಪದೇ ಅದರ ಬಗ್ಗೆ ಅವರು ಕಲಿತು ನಿರ್ಣಯ ಮಾಡಿರುತ್ತಾರೆ. ತಾವು ಎತ್ತಿರುವ ವಿಷಯವನ್ನು ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ನಾನು ತರುತ್ತೇನೆ. ತಾವೂ ಕೂಡ ಅವರ ಜೊತೆಗೆ ಚರ್ಚಿಸಬಹುದು. ಅಗತ್ಯ ಕಂಡಲ್ಲಿ ಈ ವಿಚಾರದಲ್ಲಿ ಅಂತರರಾಜ್ಯ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಬಹುದು.

(ಋ) ವಿಷಯ: ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಕೃತಿ ವಿಕೋಪದಿಂದ ಉಂಟಾದ ನಷ್ಟಗಳ ಬಗ್ಗೆ.

ಶ್ರೀ ಕೆ. ಪ್ರಭಾಕರ ಬಂಗೇರ : ಅಧ್ಯಕ್ಷರೇ ನನ್ನ ಬೆಳ್ತಂಗಡಿ ಮತಕ್ಷೇತ್ರದಲ್ಲಿ ಕಳೆದ ಪ್ರಕೃತಿ ವಿಕೋಪದಿಂದ ಸುಮಾರು ಒಂದು ಕೋಟಿ ರೂ.ಗೂ ಹೆಚ್ಚು ನಷ್ಟವುಂಟಾಗಿದೆ. ಜೊತೆಗೆ ನಮ್ಮ ಬೆಂಟಾಯ ತಾಲ್ಲೂಕಿನ ಕರಂಬಾಳು ಎಂಬಲ್ಲಿ ಸೀತಾರಾಮಭಟ್ಟರ ಮನೆಗೆ ಸಿಡಿಲು ಬಡಿದು ಸುಮಾರು 5 ಲಕ್ಷ ರೂ. ಹಾನಿಯಾಗಿರುತ್ತದೆ. ಹಾಗಾಗಿ ನಾನು ಸಚಿವರನ್ನು ಒತ್ತಾಯ ಮಾಡುವುದು: ಪ್ರಕೃತಿ ವಿಕೋಪದಡಿಯಲ್ಲಿ ಪ್ರತಿ ತಾಲ್ಲೂಕಿಗೂ ಹಣವನ್ನು ಶೀಘ್ರವೇ ಬಿಡುಗಡೆ ಮಾಡಿ. ಸಿಡಿಲು ಬಡಿದಿರುವ ಕುಂಟುಂಬಕ್ಕೆ 5 ಲಕ್ಷ ರೂ. ನಷ್ಟವಾಗಿದೆ; ಸೀತಾರಾಮಭಟ್ಟರಿಗೆ ಪರಿಹಾರ ಕೊಡಿಸಬೇಕೆಂದು ತಮ್ಮ ಮೂಲಕ ಕಂದಾಯ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಅಧ್ಯಕ್ಷರೇ, ಅವರ ಪ್ರಸ್ತಾವನೆಗೆ ಲಿಖಿತವಾಗಿ ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2006–07ನೇ ಸಾಲಿನಲ್ಲಿ ಒಟ್ಟು 60 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಸಂತ್ರಸ್ತರಿಗೆ ತುರ್ತು ಪರಿಹಾರ ನೀಡಲು ಜಿಲ್ಲಾಧಿಕಾರಿಯವರು ಕೆಳಕಂಡಂತೆ ತಹಸೀಲ್ದಾರ್‌ರವರಿಗೆ ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ.

1) ಮಂಗಳೂರು ತಾಲ್ಲೂಕು	5. ಲಕ್ಷ ರೂ.
2) ಬಂಟ್ವಾಳ	4 ಲಕ್ಷ ರೂ.
3) ಪುತ್ತೂರು	3 ಲಕ್ಷ ರೂ.
4) ಬೆಳ್ತಂಗಡಿ	3 ಲಕ್ಷ ರೂ.
5) ಸುಳ್ಯ	3 ಲಕ್ಷ ರೂ.
6) ಕಡಬ ತಾಲ್ಲೂಕು	2 ಲಕ್ಷ ರೂ.
7) ಮೂಡಬಿದರೆ	2 ಲಕ್ಷ ರೂ.
ಒಟ್ಟು	22 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ.